ಬಾಯಿಗೆ ಬೆರಳಿಕ್ಕಿದರೆ ಅದರ ಸಿಬರು ತಾಗಿ ರಕ್ತ ಬಂದಿತು. ಥಟ್ಟನೆ ಬೆರಳು ತೆಗೆದು ಬಾಯಿಗಿಟ್ಟುಕೊಂಡು ಆ ರಕ್ತವನ್ನ ಚೀಪಿದರು. ಬಾಯಿಂದ ಬೆರಳು ತೆಗೆದು ನೋಡಿದರೆ ರಕ್ತ ಒಸರುತ್ತಿತ್ತು. ಪಂಚೆ ತುದಿಯನ್ನ ಹರಿದು ಬೆರಳಿಗೆ ಕಟ್ಟಿದರು. ಆದರೂ ರಕ್ತ ಪೇಟದಂತೆ ಸುತ್ತಿದ್ದ ಬಟ್ಟೆಗೊಂದು ಕೆಂಪು ತಿಲಕ ಇಡದೇ ಬಿಡಲಿಲ್ಲ!

- 2 -

ಆ ದಿನ ಮಧ್ಯಾಹ್ನವಾಗಿತ್ತು. ಹೆಂಚಿನ ಸಂದಿನಿಂದ ಬಿದ್ದ ಬಿಸಿಲುಕೋಲು ನೆಲದ ಮೇಲೆ ಬತ್ತಾಸಿನಂತೆ ಬಿದ್ದಿತ್ತು. ಆ ಕೋಲ ತುಂಬ ದೂಳಿನ ಕಣಗಳು ಇಲ್ಲಿಂದ ಅಲ್ಲಿಗೆ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದವು. ಆ ಬತ್ತಾಸಿನಂತಿದ್ದ ಬಿಸಿಲ-ನೆರಳನ್ನ ಭಗವಂತರಾಯರು ತುಳಿದರು... ಆ ಬಿಸಿಲ ಕೋಲು ನೆಲದಿಂದ ಇವರ ಮುಂಗೈಮೇಲೆ ಬಿದ್ದ, ಗಾಯದ ಬೆರಳನ್ನ ನೋಡಿತು.

ಬಹಳ ಹಿಂದೆ ಅಂದರೆ ಭಗವಂತರಾಯರ ಬಾಲ್ಯದಲ್ಲಿ, ರಥ ಸಪ್ತಮಿಯದಿನ, ಮಂಡಗದ್ದೆಯ ಅಂಗಳವನ್ನ ಕರಿಹಾಕಿ ಸಾರಿಸಿ ತುಳಸಿಕಟ್ಟೆಯ ಎದುರು ಸೂರ್ಯನ ರಥದ ರಂಗೋಲಿ ಹಾಕಿದ್ದಳು ಅಮ್ಮ. ಸೂರ್ಯನ ರಥಕ್ಕೆ ಏರಿಸಿದ್ದ ಮಲ್ಲಿಗೆ, ಸಂಪಿಗೆ, ನಿತ್ಯಪುಷ್ಪ ಮುಂತಾದ ಹೂಗಳ ಘಮಘಮ. ಆಗಷ್ಟೇ ಅರತಿ ಬೆಳಗಿ ಊದುಕಡ್ಡಿ ಹಚ್ಚಿದ್ದರಿಂದ ಅದರ ಪರಿಮಳ ಸಹ ಸೇರಿತ್ತು. ಸೂರ್ಯ ನಗಾಡುತ್ತ ನೈವೇದ್ಯ ಮಾಡಿರಿಸಿದ್ದ ಬೆಲ್ಲದ ತುಂಡನ್ನ ನೆಕ್ಕಿ ರುಚಿ ನೋಡುತ್ತಿದ್ದ. ಇರುವೆ, ಗೊದ್ದಗಳು, ಸೂರ್ಯನನ್ನ ಕಚ್ಚಲಾಗದೇ ಬೆಲ್ಲವನ್ನು ಬಿಡಲಾಗದೇ ಯುದ್ಧ ಸಾರಿದ್ದವು. ಆ ಸೂರ್ಯ ಆ ಇರುವೆಗಳ ಸೈನ್ಯ ಅಂಗಳದ ಸೂರ್ಯನ ರಥದ ರಂಗೋಲಿ, ಇವೆಲ್ಲ ಸಂತೋಷ ಕೊಡುತ್ತಿದ್ದವಲ್ಲ ಎಂದು ಎಲ್ಲ ನೆನಪಾಗಿ ಮನಸ್ಸು ತೇವವಾಗಿ, ಉರಿ ಸ್ವಲ್ಪ ಆರಿದಂತಾಯಿತು. ಆದರೆ ನಿನ್ನೆ ಮಾಡಿದ ಮಾಡಬಾರದ ಕೆಲಸ ಮೇಲೆದ್ದು ಬಂದು ಉರಿ ಕಾಣಿಸಿತು. ಆ ಉರಿಯನ್ನ ತಾಪವನ್ನ ತಡೆಯಲಾಗದೆ ರಾಯರು ಕುರ್ಚಿಯ ಎದುರು ಎಲ್ಲ ಹೇಳಿಕೊಳ್ಳುತ್ತ ಹೇಳಿಕೊಳ್ಳುತ್ತಾ ಕೈ ಕಟ್ಟಿ ನಿಂತರು.

- 3 -

ದಿನೇ ದಿನೇ ಈ ತಪ್ಪೊಪ್ಪಿಗೆಗಳು ಜಾಸ್ತಿಯಾಗ ತೊಡಗಿದವು.

ರಾಯರು ಅಟ್ಟವೇರುವಾಗ ಮೆಟ್ಟಿಲುಗಳನ್ನು ಎಣಿಸಿ, ಧಡಗುಡುವ ಎದೆಯನ್ನ ಬಲಗೈಲಿ ಹಿಡಿದುಕೊಂಡು, ನಿಧಾನವಾಗಿ ಬಾಗಿಲು ತೆಗೆದು ಕುರ್ಚಿಯ ಎದುರು ನಿಂತು ನಿಟ್ಟುಸಿರುಬಿಟ್ಟರು. ಕುರ್ಚಿಯಂತೂ ದುರದುರ ನೋಡಿ ಮುಂದೇನು? ಎಂದು ಕೇಳಿದಂತಾಗಿ, ಗುಟ್ಟು ಹೇಳುವಂತೆ ಕುರ್ಚಿಯ ಬೆನ್ನಿನ ಭಾಗದ ಬಲ ತುದಿಯಲ್ಲಿ ಬುಗುಟಿನಂತಿದ್ದ ಭಾಗವನ್ನೇ ಕಿವಿ ಎಂದುಕೊಂಡು ಮಾಡಿದ್ದ ಪಾಪವನ್ನೆಲ್ಲ ನಿವೇದಿಸತೊಡಗಿದರು. 'ನಾನು ಕೊಲೆ ಮಾಡಿಲ್ಲ. ಅದು ಅವನು ಮಾಡಿದ್ದು...' ಎಂದು ಅಲವತ್ತುಕೊಂಡರು. ಕೆನ್ನೆ ಕೆನ್ನೆ ಬಡಿದುಕೊಂಡರು. ನಿಜ ಹೇಳಬೇಕೆಂದರೆ ಭಗವಂತರಾಯರು ಎಂದೂ ಏನೂ ಮಾಡುತ್ತಿರಲಿಲ್ಲ. ಎಲ್ಲ ಕಳ್ಳತನ ಕೊಲೆ, ಸುಲಿಗೆ, ಖೂನಿಗಳನ್ನ ಬೇರೆಯವರು ಯಾರು ಯಾರೋ ಮಾಡಿದ್ದರು. ಪೊಲೀಸ್ ಸ್ಟೇಷನ್ನಿನಲ್ಲಿ ಲಾಠಿ ಏಟು ತಿಂದಿದ್ದರು. ಜೈಲು ಸೇರಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದರು. ನ್ಯಾಯಾಧೀಶರ ಮುಂದೆ ತಪ್ಪೊಪ್ಪಿಕೊಂಡು ರಾಯರ ಹೆಸರು ಹೊರಬಾರದಂತೆ ನೋಡಿಕೊಂಡಿದ್ದರು. ಹೀಗಾಗಿ ಅನೇಕ ಮನುಷ್ಯರಿಗೆ ದೊರೆತ ಶಿಕ್ಷೆಗಳು, ಹೊಡೆತಗಳು, ನರಳಿಕೆಗಳು, ಪಾಪಗಳು-ಇವಕ್ಕೆಲ್ಲ ತಮ್ಮ ಬಾಜಿ-ವಶೀಲಿಗಳು, ಲಂಚ ರುಷುವತ್ತುಗಳು ಕಾರಣ...ಎಲ್ಲವೂ ಒಂದಾಗಿ ರಾಯರು ಒಳಗಿಂದೊಳಗೆ ಉರಿಯತೊಡಗಿದಾಗೆಲ್ಲ ಕುರ್ಚಿಯೆಂಬ ದೇವರೇ ಗತಿಯಾಯಿತು.

ಪಾಪದ ಮೇಲೆ ಪಾಪಗಳು ಹೇಳಿ ಮುಗಿಯದ ಕರ್ಮಕಾಂಡಗಳು ದಿನಕ್ಕೊಂದು ಪಾಪ ಅಂದಂದಿನ ಪಾಪ ಅಂದಂದಿಗೆ ಕುರ್ಚಿಯ ಎದುರು ನಿವೇದಿತವಾಗಿ ಬಿಡುಗಡೆ ಸಿಕ್ಕಂತಾಗಿ ಇವರಿಗೆ ರೆಕ್ಕೆ ಬಂದು ಹಾರಿ ಹೋಗಿ, ಮುಗಿಲ ಸೂರ್ಯನನ್ನ, ಚಂದ್ರನನ್ನ ನೋಡಿ ಅಹಾ ಎನ್ನ ಸಮಾನರಾರಿಹರು? ಎಂದು ಹಾರಾಡಿ ನಗಾಡಿ ದೊಡ್ಡನಗೆ ನಕ್ಕು ಆ ನಗೆ ಗುಡುಗಾಗಿ, ಸಿಡಿಲಾಗಿ, ಮಿಂಚಾಗಿ ಇಳೆಗೆ ಮಳೆ ಸುರಿಸಿದಂತಾಗಿ ಎಲ್ಲ ತಂಪಾಯಿತು. ಒಳಗೆ ಹಾಯೆನಿಸಿತು.

ಎಲ್ಲವನ್ನೂ ಕೇಳಿಸಿಕೊಂಡ ಒಡಲ ತುಂಬಿಕೊಂಡ, ಕುರ್ಚಿ- ಇನ್ನು ನಾನು ತಡೆಯಲಾರೆ ಎಂದು ಅದರ ದೇಹ ಸಾವಿರ ಚೂರಾಗಿ ಸಿಡಿಯಿತು. ಆ ಅನೇಕ ಚೂರುಗಳು ಭಗವಂತರಾಯರನ್ನು ಮುಚ್ಚಿ ಹಾಕಿದವು.

●